ದಿನಾಂಕ ೨೯.೧೧.೨೦೧೮ ರಂದು ಫ್ರಾಸ ೩-ಕೃಷ್ಣಮೂರ್ತಿ ರವರು ಹಾಜರಿದ್ದಾರೆ.
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

*ಪಾಟೀ ಸವಾಲು:: ಆರೋಪಿಪರ ಶ್ರೀ ಸಿ.ಎನ್.ವಿ ವಕೀಲರಿಂದ::*

5. ನಾನು ಈ ಪ್ರಕರಣದಲ್ಲಿ ಮೌಲ್ಯಮಾಪನ ಮಾಡಿರುವ ಕಟ್ಟಡವನ್ನು ಲೋಕಾಯುಕ್ತ ಸಿಬ್ಬಂದಿ ನನಗೆ ತೋರಿಸಿದರು. ನಾನು ನಿಪಿ-65-ವರದಿ ಕೊಡುವ ಮೊದಲು ಅದಕ್ಕೆ ಸಂಬಂಧಪಟ್ಟ ಪೂರ್ವ ನಡವಳಿಕೆಗಳನ್ನು ನಮ್ಮ ಕಚೇರಿಯ Asst. Executive Engineer-Rukmanganda ಮಾಡಿದ್ದಾರೆ. ಅವರು ಮಾಡಿದ ನಡವಳಿಕೆಗಳು ಮತ್ತು ದಾಖಲೆಗಳ ಮೇಲೆ ನಾನು ನಿಪಿ-65 ವರದಿಯನ್ನು ತಯಾರಿಸಿ ಸಲ್ಲಿಸಿದ್ದೇನೆ. ಎಲ್‌ಐಜಿ ನಂ.-1442-ಸ್ವತ್ತಿಗೆ ಸಂಬಂಧಪಟ್ಟಂತೆ ಸದರಿ ಕಟ್ಟಡವನ್ನು ಯಾವಾಗ ಕಟ್ಟಲು ಪ್ರಾರಂಭಿಸಿದರು ಎನ್ನುವ ಬಗ್ಗೆ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ನನಗೆ ಒದಗಿಸಲಿಲ್ಲ. ಕಟ್ಟಡದ ಸಾಮಗ್ರಿಗಳು ಅಂದರೆ ಕಬ್ಬಿಣ, ಇಟ್ಟಿಗೆ, ಸಿಮೆಂಟ್ ಮತ್ತು ಫ್ಲೋರ್ ಟೈಲ್ಸ್‌ನ ಬೆಲೆಗಳು ಕಂಪೆನಿಯಿಂದ ಕಂಪೆನಿಗೆ ವ್ಯತ್ಯಾಸವಿರುತ್ತವೆ. ಮೇಲೆ ಹೇಳಿದ ಎಇಇ ರವರು ತಯಾರಿಸಿದ ದಾಖಲಾತಿಗಳಲ್ಲಿ ಈ ಮೇಲ್ಕಂಡ ವಸ್ತುಗಳ ಕಂಪೆನಿಯ ಬಗ್ಗೆ ನಮೂದಿಸಿರಲಿಲ್ಲ. ಆದುದರಿಂದ ಸದರಿ ಕಟ್ಟಡಕ್ಕೆ ಉಪಯೋಗಿಸಿದ ಮೇಲೆ ಹೇಳಿದ ವಸ್ತುಗಳು ಉತ್ತಮ ಗುಣಮಟ್ಟದವೇ ಅಥವಾ ಕಳಪೆ ಗುಣಮಟ್ಟದವೇ ಎಂದು ಹೇಳಲಾಗುವುದಿಲ್ಲ. ಆದುದರಿಂದ ನಾನು ತಯಾರಿಸಿರುವ ನಿಪಿ-65-ಮೌಲ್ಯಪಟ್ಟಿಯಲ್ಲಿ(Valuation Report) ವ್ಯತ್ಯಾಸವಾಗುವ ಸಾಧ್ಯತೆಗಳಿವೆ.

1. ಮೇಲೆ ಹೇಳಿದ ಎಇಇ ರವರು ತಯಾರಿಸಿದ ದಾಖಲಾತಿಗಳಲ್ಲಿ ಎಲೆಕ್ಟ್ರಿಕಲ್ ಮತ್ತು ಸ್ಯಾನಿಟರಿ ವಸ್ತುಗಳ ಕಂಪೆನಿ ಮತ್ತು ಅವುಗಳ ಗುಣಮಟ್ಟದ ಬಗ್ಗೆ ನಮೂದಿಸಿಲ್ಲ. ಕಟ್ಟಡ ಕಟ್ಟಲು ತಗುಲುವ ಖರ್ಚಿನ ಆಧಾರದ ಮೇಲೆ ಕಟ್ಟಡದ ಬೆಲೆಯ ಮೇಲೆ ಶೇ.2 ರಷ್ಟು ಅಥವಾ ಶೇ.3 ರಷ್ಟು ಹಣವನ್ನು ಎಲೆಕ್ಟ್ರಿಕಲ್ ಮತ್ತು ಸ್ಯಾನಿಟರಿ ವಸ್ತುಗಳ ಖರ್ಚುಗಳೆಂದು ಪರಿಗಣಿಸುತ್ತೇವೆ. ಪರಿಣಿತ ಎಲೆಕ್ಟ್ರೀಷಿಯನ್ ಮತ್ತು ಪರಿಣಿತ ಸ್ಯಾನಿಟರಿ ಕೆಲಸಗಾರರು ಕಟ್ಟಡವನ್ನು ಪರಿಶೀಲಿಸಿದರೆ ಎಲೆಕ್ಟ್ರಿಕಲ್ ಮತ್ತು ಸ್ಯಾನಿಟರಿ ವಸ್ತುಗಳ ಖರ್ಚುಗಳನ್ನು ನಿಖರ ಬೆಲೆಯ ಹತ್ತಿರದ ಬೆಲೆಯನ್ನು ನಿರ್ಧರಿಸಬಹುದು.

6. ನಿಪಿ-65 ವರದಿಯ ಜೊತೆಯಲ್ಲಿ ಎಇಇ ರುಕ್ಮಾಂಗದರವರು ತಯಾರಿಸಿದ ನಡವಳಿಕೆಗಳನ್ನೂ ಸಹ ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿದ್ದೇನೆ. ದಿನಾಂಕ 16-11-2013 ರಂದು ಮೇಲೆ ಹೇಳಿದ ಕಟ್ಟಡಕ್ಕೆ ನಾನು ಭೇಟಿ ನೀಡಿ ಪರಿಶೀಲನೆ ಮಾಡಿಲ್ಲ ಎಂದರೆ

ಸರಿಯಲ್ಲ. ನಾನು ಲೋಕಾಯುಕ್ತ ಪೊಲೀಸರ ಕೋರಿಕೆಯ ಮೇರೆಗೆ ಮತ್ತು ಎಇಇ ರುಕ್ಮಾಂಗದರವರು ತಯಾರಿಸಿದ ನಡವಳಿಕೆಗಳ ಆಧಾರದ ಮೇಲೆ ನಿಪಿ-65-ವರದಿಯನ್ನು ತಯಾರಿಸಿ ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ನಿಪಿ-65 ವರದಿಯಲ್ಲಿ ಸದರಿ ಕಟ್ಟಡದ ಬೆಲೆ 46,04,709/- ಎಂದು ನಮೂದಿಸಿದ್ದು ಅದು ಕಲ್ಪನಾತೀತ ಮೌಲ್ಯ ಎಂದರೆ ಸರಿಯಲ್ಲ. ಸದರಿ ಕಟ್ಟಡಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ ಇದೆ

ಪ್ರಧಾನ ಜಿಲ್ಲಾ ನ್ಯಾಯಾಧೀಶರು,
*ಹಾಸನ.*